ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು). —

ಅ) ಪ್ರಾಂಶುಪಾಲರ ಅಧಿಕಾರ ವ್ಯಾಪ್ತಿ :

ಉಪನ್ಯಾಸಕರು ಪತ್ರಾಂಕಿತ ಅಧಿಕಾರಿಗಳಾಗಿರುವುದರಿಂದ, ಕಾಲೇಜಿನ ಪ್ರಾಂಶುಪಾಲರ ವರದಿಯನ್ನು ಆನುಲಕ್ಷಿಸಿ, ಕಾಲೇಜು ಶಿಕ್ಷಣ ಇಲಾಖೆಯು ನಿರ್ದೇಶಕರ ಸಲಹೆಯ ಪ್ರಕಾರ ಕರ್ನಾಟಕ ನಾಗರೀಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ನಿವೇದನೆ) ನಿಯಮ ೧೯೫೭ರ ಮೇರೆಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಇತರೆ ಸಿಬ್ಬಂದಿ ವರ್ಗದವರು :

೧) ಅಟೆಂಡರ್ ಮತ್ತು ಮೇಲ್ವಿಚಾರಣ ಹುದ್ದೆಗಳ ಬಗ್ಗೆ ಶಿಸ್ತಿನ ಕ್ರಮ ನಿರ್ದೇಶಕರ ಅಧಿಕಾರಕ್ಕೆ ಒಳಪಟ್ಟಿದ್ದು. (ಇತ್ತೀಚಿನ ಸರ್ಕಾರಿ ಆಜ್ಞೆ ಸಂಖ್ಯೆ ಇಡಿ ೨೨ ಯುಇಸಿ ೮೮, ದಿನಾಂಕ ೩೦-೧-೮೮ರ ಪ್ರಕಾರ, ಅವರ ನಿರ್ದೇಶಕರ ವ್ಯಾಪ್ತಿಗೊಳಪಟ್ಟಿದೆ) ಪ್ರಾಂಶುಪಾಲರ ವರದಿಯನ್ನು ಆಧರಿಸಿ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶನಾಲಯದಲ್ಲಿ ನಿರ್ಧಾರ ಕೈಗೊಂಡು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.

೨) ರಿಜಿಸ್ಟ್ರಾರ್‌ರವರು ಕಾಲೇಜಿನ ದಿನನಿತ್ಯದ ಆಡಳಿತಾತ್ಮಕ ವ್ಯವಹಾರಗಳನ್ನು ನೋಡಿ ಕೊಳ್ಳುವಲ್ಲಿ ಕಾಲೇಜಿನ ಪ್ರಾಂಶುಪಾಲರಿಗೆ ಸಹಕರಿಸುವುದು.

೩) ವೆಂಕಟಸ್ವಾಮಿ ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರವು ತತ್ವಶಃ ಒಪ್ಪಿರುವುದು ನಿಜ. ಕೇಂದ್ರ ಸರಕಾರದೊಂದಿಗೆ ಚರ್ಚಿಸಿ ಈ ಸೂತ್ರಗಳನ್ನು ಕಾರ್ಯಗತಗೊಳಿಸಲಾಗುವುದು.

ಈ) ಇಲ್ಲ.

ಸವಣೂರು ಶೆರೆವಾಡ ರಸ್ತೆಯ ಕಾರ್ಯದಲ್ಲಿ ದುರುಪಯೋಗವಾಗಿರುವುದು

೨೦೧೦ ಶ್ರೀ ಬಿ. ಎ. ಉಪ್ಪಿನ್, (ಕುಂದಗೋಳ್).— ಮಾನ್ಯ ನಗರಾಭಿವೃದ್ಧಿ, ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸವಣೂರಿಂ ಶೆರೆವಾಡ ರಸ್ತೆ ವಾಹನ ಸಂಚಾರಕ್ಕಾಗಿ ನಿರ್ಮಾಣವಾಗಿ ಎಷ್ಟುವರ್ಷಗಳಾದವು ಅದಕ್ಕೆ ತಗುಲಿದ ವೆಚ್ಚವೆಷ್ಟು ?

ಆ) ಸಂಚಾರಕ್ಕೆ ಬಿಡುಗಡೆಯಾದ ನಂತರ, ಅದರ ನಿರ್ವಹಣೆಗಾಗಿ ತಗುಲಿದ ವೆಚ್ಚವೆಷ್ಟು ?

ಶ್ರೀ ಎಂ. ಚಂದ್ರಶೇಖರಿರ್ (ನಗರ ಅಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು) —

ಅ) ಈ ರಸ್ತೆಯು ೧೯೬೫ಕ್ಕಿಂತ ಮೊದಲು ನಿರ್ಮಾಣವಾಗಿತ್ತು. ಈ ರಸ್ತೆಯನ್ನು ಹಂತ ಹಂತವಾಗಿ ಲೋಕೋಪಯೋಗಿ ಇಲಾಖೆಗೆ ನಿರ್ವಹಣೆಗಾಗಿ ಸರಕಾರಿ ಆದೇಶ ಸಂಖ್ಯೆ ಪಿಡಬ್ಲ್ಯೂಡಿ ೧೫೫ ಸಿಎಸ್‌ಆರ್ ೪೪, ದಿನಾಂಕ ೧೫-೬-೧೯೬೫ ಹಾಗೂ ಪಿಡಬ್ಲ್ಯೂಡಿ ೧೨೩ ಸಿಎಸ್‌ಆರ್ ೬೭, ದಿನಾಂಕ ೧೫-೨-೧೯೬೮ ಪ್ರಕಾರ ತೆಗೆದುಕೊಳ್ಳಲಾಗಿತ್ತು. ಈ ರಸ್ತೆಯು ೧೯೬೫ಕ್ಕಿಂತ ಮುಂಚೆ ನಿರ್ಮಾಣವಾದ್ದರಿಂದ ಇದರ ನಿರ್ಮಾಣಕ್ಕಾಗಿ ತಗುಲಿದ ವೆಚ್ಚ ಈ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ಈ ರಸ್ತೆಯು ಹಳ್ಳಿ ದರ್ಜೆ ರಸ್ತೆಯಾಗಿದ್ದು ಈಗ ಜಿಲ್ಲಾ ಪರಿಷತ್, ಧಾರವಾಡ ಇವರ ವ್ಯಾಪ್ತಿಯಲ್ಲಿ ಬರುವುದು.

ಆ) ಲೋಕೋಪಯೋಗಿ ಇಲಾಖೆಗೆ ನಿರ್ವಹಣೆಗಾಗಿ ತೆಗೆದುಕೊಂಡ ನಂತರ ನಿರ್ವಹಣೆ ಮತ್ತು ಸಂಧಾರಣೆಗಾಗಿ ಮಾಡಿದ ಒಟ್ಟು ವೆಚ್ಚ ೨೭.೧೨ ಲಕ್ಷ ರೂ.ಗಳು.